**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ತರೀಕೆರೆ**

**ಓ ಎಸ್ ನಂ.36/2019**

ಡಿಡಬ್ಲೂ 5

ದಿನಾಂಕಃ 18.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ತಿಮ್ಮಪ್ಪ |
| ಗಂಡನ ಹೆಸರು– | ಕೆಂಪಹೋಬಳಪ್ಪ |
| ವಯಸ್ಸು – | 65 ವರ್ಷ |
| ಉದ್ಯೋಗ– | ವ್ಯವಸಾಯ |
| ವಾಸ– | ಜೋಡಿ ಬೋಕಿಕೆರೆ ಗ್ರಾಮ |

**ಮುಖ್ಯ ವಿಚಾರಣೆಃ 1 ಮತ್ತು 3 ರಿಂದ 11 ಪ್ರತಿವಾದಿಯರ ಪರವಾಗಿ ಶ್ರಿ ಬಿ ಟಿ ಕೆ ವಕೀಲರಿಂದ**

1. ನನಗೆ ವಾದಿ ಮತ್ತು ಪ್ರತಿವಾದಿಯ ಪರಿಚಯ ಇರುತ್ತದೆ. ಎರಡನೇ ಪ್ರತಿವಾದಿ ತಿಮ್ಮಪ್ಪರವರಿಗೆ ಇಬ್ಬರು ಹೆಂಡತಿಯರಾಗಿದ್ದು ಅವರೆಂದರೆ ವಾದಿ ಚಂದ್ರಮ್ಮ ಮತ್ತು 8 ನೇ ಪ್ರತಿವಾದಿ ಕರಿಯಮ್ಮ. ಸದರಿಯವರಿಬ್ಬರಿಗೂ ಒಂದೊಂದು ಗಂಡು ಮಕ್ಕಳು ಇರುತ್ತಾರೆ. ವಾದಿಯ ಮಗ ಈಗ ಸಮಾರು 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ. ಮಗ ಮರಣ ಹೊಂದಿದ ನಂತರ ವಾದಿಯು ಜೋಡಿ ಬೋಕಿಕೆರೆ ಗ್ರಾಮದಲ್ಲಿ ಸುಮಾರು 1–2 ವರ್ಷಗಳವರೆಗೆ ಎರಡನೇ ಪ್ರತಿವಾದಿ ಜೊತೆ ವಾಸವಾಗಿದ್ದರು. ನಂತರ ವಾದಿ ಮತ್ತು ಎರಡನೇ ಪ್ರತಿವಾದಿಯ ಮಧ್ಯೆ ಸರಿ ಹೊಂದದೆ ಇದುದ್ದಕ್ಕಾಗಿ ಪಂಚಾಯತಿ ನಡೆದು ಪಂಚಾಯತಿಯಲ್ಲಿ ಎರಡನೇ ಪ್ರತಿವಾದಿಯು ವಾದಿಗೆ ಅವರ ಭಾಗಕ್ಕೆ ಎಂದು ರೂ.2 ಲಕ್ಷ ನಗದು ಹಣವನ್ನು ಕೊಟ್ಟಿರುತ್ತಾರೆ. ನಂತರ ಎರಡನೇ ಪ್ರತಿವಾದಿಯು ವಾದಿಯ ಕಾಟಾಚಾರಕ್ಕೆ ಹೃದಯಘಾತವಾಗಿ ಮರಣ ಹೊಂದಿರುತ್ತಾರೆ. ಎರಡನೇ ಪ್ರತಿವಾದಿ ಮರಣ ಹೊಂದಿದ ನಂತರ ವಾದಿಯು ಎರಡನೇ ಹೆಂಡತಿಯಾದ ಕರಿಯಮ್ಮನ ಮಗನಾದ ಶರತ್‌ರವರ ಜೊತೆ ಬೆಂಗಳೂರಿನಲ್ಲಿ ವಾಸವಾದರು. ನಂತರ ಶರತ್ ರವರ ಮದುವೆ ಆಗಿದ್ದು ಸದರಿ ಮದುವೆಯಲ್ಲಿ ವಾದಿಯು ಹಾಜರಿದ್ದರು. ಎರಡನೇ ಪ್ರತಿವಾದಿಯು ವಾದಿಗೆ ಅವರ ಹಿಸ್ಸೆಗೆಂದು ಈಗಾಗಲೇ ಹಣ ಕೊಟ್ಟಿರುವುದರಿಂದ ವಾದಿಯು ದಾವಾ ಸ್ವತ್ತಿಗಳಲ್ಲಿ ಯಾವುದೇ ಹಿಸ್ಸೆಗೆ ಅರ್ಹರಲ್ಲ.

2. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಎರಡನೇ ಪ್ರತಿವಾದಿಯ ಕುಟುಂಬಕ್ಕೆ ಬೀರೂರಿನಲ್ಲಿ ಒಂದು ನಿವೇಶನ ಇತ್ತು. ಸದರಿ ನಿವೇಶವನ್ನು ವಾದಿಯು ತಮ್ಮ ತಮ್ಮನಾದ ಚೌಡಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ.

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಸಿ ಎನ್ ಸಿ ವಕೀಲರಿಂದಃ**

3. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದಿದ ನೋಟಿಸ್ ಬಂದಿತ್ತು. ದಾವೆಯ ಯಾವ ಪಕ್ಷಗಾರರು ನನ್ನನ್ನು ನ್ಯಾಯಾಲಯದ ಮೂಲಕ ಸಾಕ್ಷ್ಯ ನುಡಿಯಲು ಕರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಬರುವ ಮುಂಚೆ ದಾವೆಯ ವಿಚಾರಗಳನ್ನು ಯಾರಿಂದಲೂ ತಿಳಿದುಕೊಂಡಿರುತ್ತೇನೆ. ಈ ದಾವೆಯನ್ನು ವಾದಿ ಚಂದ್ರಮ್ಮರವರು ಭಾಗ ಕೋರಿ ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ.

4. ವಾದಿ ಮತ್ತು ಪ್ರತಿವಾದಿಯರು ನನಗೆ ಸಂಬಂಧಿಕರು ಮತ್ತು ಒಂದೇ ಊರಿನವರು ಆಗಬೇಕು. ನಾನು ಜೋಡಿ ಬೋಕಿಕೆರೆ ಗ್ರಾಮದಲ್ಲಿಯೇ ಮದುವೆ ಆಗಿರುತ್ತೇನೆ ಎಂದರೆ ಸರಿ. ನಾನು ಪ್ರತಿವಾದಿಯರ ಪರವಾಗಿ ಹಾಜರಾಗಿರುವ ಶ್ರೀ ಬಿ ಟಿ ಕೆಂಪಚ್ಚ ವಕೀಲರ ತಂಗಿಯನ್ನು ಮದುವೆ ಆಗಿರುತ್ತೇನೆ ಎಂದರೆ ವಕೀಲರ ಚಿಕ್ಕಪ್ಪನ ಮಗಳನ್ನು ಮದುವೆ ಆಗಿರುತ್ತೇನೆ ಎಂದು ನುಡಿಯುತ್ತಾರೆ. ಹಾಗಾಗಿ ನಾನು ಸದರಿ ವಕೀಲರ ಹೇಳಿಕೆಯ ಮೇರೆಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ ಆದರೆ ನನಗೆ ನೋಟಿಸ್ ಬಂದಿದ್ದ ಕಾರಣ ಬಂದಿರುತ್ತೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳನ್ನು ನನ್ನ ಸ್ವಂತ ಅನುಭವದ ಮೇಲೆ ಹೇಳಿರುತ್ತೇನೆ.

5. ವಾದಿ ಮತ್ತು ಎರಡನೇ ಪ್ರತಿವಾದಿ ಮಧ್ಯೆ ಯಾವುದೇ ವಿಚ್ಛೇಧನ ಆಗಿರುವುದಿಲ್ಲ ಎಂದರೆ ಸರಿ. ಎರಡನೇ ಪ್ರತಿವಾದಿಯು ಎಂಟನೇ ಪ್ರತಿವಾಯ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು ಸದರಿ ವಿಚಾರವನ್ನು ಮರೇಮಾಚಿ ಎರಡನೇ ಎದುರುದಾರರು ವಾದಿಯ ಜೊತೆ ಮದುವೆ ಮಾಡಿಕೊಂಡಿದ್ದರು ಮತ್ತು ನಂತರ ಸದರಿ ವಿಚಾರ ವಾದಿಗೆ ಗೊತ್ತಾಗಿ ಗ್ರಾಮದಲ್ಲಿ ಪಂಚಾಯತಿ ನಡೆದಿತ್ತು ಎಂದರೆ ಸರಿಯಲ್ಲ. ಸದರಿ ಅಕ್ರಮ ಸಂಬಂಧದ ವಿಚಾರವಾಗಿ ಗಲಾಟೆ ಆಗಿ ಪಂಚಾಯತಿ ನಡೆದು ವಾದಿಯು ತಮ್ಮ ಮಗನನ್ನು ಕರೆದುಕುಂಡು ತಮ್ಮ ತವರು ಮನೆಗೆ ಹೋಗಿ ನೆಲೆಸಿದರು ಎಂದರೆ ಮನೆಯ ವಿಚಾರಗಳಿಗೆ ಸಂಬಂಧಿಸಿ ವಾದಿ ಮತ್ತು 2 ನೇ ಪ್ರತಿವಾದಿಯ ಮಧ್ಯೆ ಹೊಂದಾಣಿಕೆ ಆಗದೇ ಇದುದ್ದಕ್ಕಾಗಿ ಅವರು ಮನೆ ಬಿಟ್ಟು ಹೋಗಿ ತವರು ಮನೆಯಲ್ಲಿ ನೆಲೆಸಿದ್ದರು ಎಂದು ನುಡಿಯುತ್ತಾರೆ. ಹೀಗೆ ವಾದಿಯು ಊರು ಬಿಟ್ಟು ತವರು ಮನೆಗೆ ಹೋದ ನಂತರ ಪುನಃ ಜೋಡಿ ಬೋಕಿಕೆರೆ ಗ್ರಾಮಕ್ಕೆ ಬಂದು ವಾಸವಾಗಿಲ್ಲ ಎಂದರೆ ಸರಿಯಲ್ಲ ಆದರೆ ವಾಪಸ್ಸು ಬಂದು ಎರಡನೇ ಪ್ರತಿವಾದಿಯ ಜೊತೆ ವಾಸವಾಗಿದ್ದರು. ಅವರು ಊರು ಬಿಟ್ಟು ಹೋದ ಎರಡು ವರ್ಷಗಳ ನಂತರ ಊರಿಗೆ ವಾಪಸ್ಸು ಬಂದು ಎರಡನೇ ಪ್ರತಿವಾದಿ ಸಾಯುವವರೆಗೂ ಅವರ ಜೊತೆ ವಾಸವಾಗಿದ್ದರು. ನಾನು 8 ನೇ ಪ್ರತಿವಾದಿಯನ್ನು ಬಿಡುವುದಿಲ್ಲ

ಎಂದು ಹೇಳಿದಕ್ಕೆ ವಾದಿಯು ಊರು ಬಿಟ್ಟು ಹೋದವರು ಪುನಃ ವಾಪಸ್ಸು ಬಂದಿರುವುದಿಲ್ಲ ಮತ್ತು ತವರು ಮನೆಯಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಮಗನನ್ನು ವಾದಿಯ ಸಹೋದರರೇ ಓದಿಸಿ ನೌಕರಿ ಕೊಡಿಸಿದ್ದರು ಎಂದರೆ ಸರಿಯಲ್ಲ. ಹೀಗಿ ನೌಕರಿ ಸಿಕ್ಕ ನಂತರ ವಾದಿಯ ಮಗ ತಮ್ಮ ಇಲಾಖೆಯಿಂದ ಪರವಾನಿಗೆ ಪಡೆದುಕೊಂಡು ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

6. ವಾದಿ ಮತ್ತು 2 ನೇ ಪ್ರತಿವಾದಿಯ ಮಧ್ಯೆ ಈಗ ಸುಮಾರು 10 ವರ್ಷಗಳ ಹಿಂದೆ ಪಂಚಾಯತಿ ನಡೆದಿತ್ತು. ಪಂಚಾಯತಿಯಲ್ಲಿ ಸುಮಾರು 100 ಜನರು ಸೇರಿದ್ದು ಅವರಲ್ಲಿ ಊರಿನ ಮುಖಂಡರಾದ ಶಾಂತಪ್ಪ , ನಾನು, ಲಕ್ಷ್ಮಪ್ಪ , ಲೋಕೇಶ ಹಾಗೂ ಇತರರು ಇದ್ದರು. ಈ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಪಂಚಾಯತಿಯಲ್ಲಿ ವಾದಿಗೆ ರೂ.2 ಲಕ್ಷ ಗಳನ್ನು ಕೊಟ್ಟ ಬಗ್ಗೆ ಒಂದು ಬೀಳಿ ಹಾಳೆಯ ಮೇಲೆ ದಾಖಲೆ ಬರೆಯಲಾಗಿತ್ತು ಆದರೆ ಅದು ಯಾರ ಕೈಗೆ ಸೇರಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಊರಲ್ಲಿ ಸುಮಾರು ಪಂಚಾಯತಿಗಳನ್ನು ಮಾಡಿರುತ್ತೇನೆ. ನಾನು ಹೇಳಿದಂತೆ ವಾದಿ ಮತ್ತು ಎರಡನೇ ಪ್ರತಿವಾದಿ ಮಧ್ಯೆ ಯಾವುದೇ ಪಂಚಾಯತಿ ನಡೆದಿಲ್ಲ ಮತ್ತು 2 ನೇ ಪ್ರತಿವಾದಿಯು ವಾದಿಗೆ ಯಾವತ್ತೂ 2 ಲಕ್ಷ ರೂ.ಗಳನ್ನು ಕೊಟ್ಟಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 2 ನೇ ಪ್ರತಿವಾದಿ ಜೊತೆಯಲ್ಲಿ ವಾಸವಾಗಿದ್ದರು ಮತ್ತು ವಾದಿಯ ಕಾಟಾಚಾರಕ್ಕೆ ಎರಡನೇ ಪ್ರತಿವಾದಿ ಮರಣ ಹೊಂದಿರುತ್ತಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಕುಟುಂಬದ ಮಗಳಿಗೆ ಮದುವೆ ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಮುಜಫರ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತರೀಕೆರೆ.